ಅನುಬಂಧ 1

ರಾಜ್ಯದಲ್ಲಿ ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವುದು

4034 (4558) : ಶ್ರೀ ಅಂಗಾರ ಎಸ್ (ಸೂಳ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳಿವೆ?

ಆ) ಇವರಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? (ಖಾಲಿ ಹುದ್ದೆಗಳ ವಿವರಗಳನ್ನು ಜಿಲ್ಲಾವಾರು ನೀಡುವುದು)

ಇ) ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು? ಇದಕ್ಕಾಗಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ 5854 ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳಿವೆ.

ಆ) 2860 ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳು ಖಾಲಿ ಇವೆ (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧವಾಗಿ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ 2220 ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. ನೇಮಕಾತಿ ಕಾರ್ಯ ಪೂರ್ಣಗೊಂಡ ಕೂಡಲೇ ಭರ್ತಿ ಮಾಡಲಾಗುವುದು.

ಬ್ಯಾಕ್‌ಲಾಗ್ ಹುದ್ದೆಗಳಲ್ಲಿ 196 ಕಿರಿಯ ಆರೋಗ್ಯ ಸಹಾಯಕರ ಹುದ್ದೆಗಳ ನೇಮಕಾತಿ ಕಾರ್ಯ ಮುಗಿದಿದ್ದು, ನೇಮಕಾತಿ ಹೊಂದಿದ ಅಭ್ಯರ್ಥಿಗಳಿಂದ ಸಿಂದುತ್ವ ಪ್ರಮಾಣ ಪತ್ರ ಮತ್ತು ಪೊಲೀಸ್ ವರದಿ ಬಂದ ಕೂಡಲೇ ನೇಮಕಾತಿ ಆದೇಶ ಹೊರಡಿಸಲಾಗುವುದು.

Statement showing the Vacant posts of Junior Health Assistant in the State

Sl. No.	District	Jr. Health Assistant (Male)		
		Sactioned	Working	Vacant
1.	Bangalore R Urban	188	136	52
2	Bangalore Rural	249	105	144
3	Kolar	279	139	140
4	Tumkur	316	188	128
5	Chitradurga	195	65	130
6	Shimoga	205	78	127
7	Davanagere	201	33	168
8	Mysore	243	144	129
9	Mandya	222	99	123

Sl. No.	District	Jr. Health Assistant (Male)		
		Sactioned	Working	Vacant
10	Mangalore	240	81	159
11	Kodagu	84	26	58
12	Hassan	239	135	104
13	Chickmagalur	174	66	108
14	Udupi	164	62	102
15	Chamarajnagar	119	42	77
16	Belgaum	389	247	142
17	Dharwar	123	56	67
18	Bijapur	280	176	104
19	Karwar	212	120	92
20	Haveri	183	95	88
21	Gadag	105	37	68
22	Bagalkote	216	141	75
23	Gulbarga	449	325	124
24	Bidar	178	105	73
25	Raichur	208	118	90
26	Bellary	241	130	111
27	Koppal	152	75	77
	Total	5854	2994	2860

ಸೂಳ್ಯ ಕ್ಷೇತ್ರದಲ್ಲಿ ಖಾಲಿ ಇರುವ ಕಿ.ಆ. ಸಹಾಯಕರುಗಳ ಭರ್ತಿ

4035 (4559) : ಶ್ರೀ ಅಂಗಾರ ಎಸ್ (ಸೂಳ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿವೆ;

ಆ) ಈ ಕೇಂದ್ರಗಳಲ್ಲಿ ಎಷ್ಟು ಜನ ಕಿರಿಯ ಆರೋಗ್ಯ ಸಹಾಯಕರು ಇರಬೇಕಾಗಿತ್ತು; ಎಷ್ಟು ಜನ ಇದ್ದಾರೆ;

ಇ) ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಎಂಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ.

ಆ) ಸೂಳ್ಯ ತಾಲ್ಲೂಕಿನಲ್ಲಿ 17 ಕಿರಿಯ ಆರೋಗ್ಯ ಸಹಾಯಕರು ಇರಬೇಕಾಗಿತ್ತು. 5 ಕಿರಿಯ ಆರೋಗ್ಯ ಸಹಾಯಕ ನೌಕರರು ಇದ್ದಾರೆ.